ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 6-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೊಪ್ಪಳ ಜಿಲ್ಲೆಯ ಗಜಲ್ ಸಾಹಿತ್ಯದಲ್ಲಿ ಬಂಡಾಯದ ಮನೋಧರ್ಮ

**ಡಾ. ಪಾರ್ವತಮ್ಮ**
ಕನ್ನಡ ಉಪನ್ಯಾಸಕರು, ಕನ್ನಡ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

***Abstract:***
*ಗಜಲ್ ಸಾಹಿತ್ಯವು ಕೇವಲ ಪ್ರೇಮ ಮತ್ತು ಭಾವನಾತ್ಮಕ ಅಭಿವ್ಯಕ್ತಿಯ ಮಾಧ್ಯಮವಾಗಿರದೆ, ಸಾಮಾಜಿಕ ಅಸಮಾನತೆ, ಶೋಷಣೆ ಹಾಗೂ ಅನ್ಯಾಯದ ವಿರುದ್ಧದ ಪ್ರತಿರೋಧದ ಧ್ವನಿಯಾಗಿ ರೂಪುಗೊಂಡಿದೆ. ಕೊಪ್ಪಳ ಜಿಲ್ಲೆಯ ಗಜಲ್ ಕವಿಗಳ ಕೃತಿಗಳಲ್ಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ವಿರುದ್ಧದ ಚಿಂತನೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಅಧ್ಯಯನವು ಗಜಲ್ ಸಾಹಿತ್ಯದಲ್ಲಿನ ಬಂಡಾಯದ ಅಂಶಗಳು ಜನಜೀವನ ಮತ್ತು ಸಾಮಾಜಿಕ ಪರಿವರ್ತನೆಗೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಅಧ್ಯಯನ ಮಾಡುತ್ತದೆ. ವಿಶೇಷವಾಗಿ ಅಸಮಾನತೆ, ಅಸ್ತಿತ್ವದ ಹೋರಾಟ ಹಾಗೂ ಜನಸಾಮಾನ್ಯರ ಅನುಭವಗಳು ಗಜಲ್‌ಗಳಲ್ಲಿ ಹೇಗೆ ಪ್ರತಿಬಿಂಬಿತವಾಗಿವೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.*

***Keywords:*** *ಗಜಲ್ ಸಾಹಿತ್ಯ, ಬಂಡಾಯ ಮನೋಧರ್ಮ, ಕೊಪ್ಪಳ ಜಿಲ್ಲೆ, ಸಾಮಾಜಿಕ ಚಿಂತನೆ, ಕನ್ನಡ ಸಾಹಿತ್ಯ*

## ಪೀಠಿಕೆ

ಕನ್ನಡ ಸಾಹಿತ್ಯ ಪರಂಪರೆಯು ಸಾವಿರಾರು ವರ್ಷಗಳ ಸುದೀರ್ಘ ಚರಿತ್ರೆಯನ್ನು ಹೊಂದಿದೆ. ಇದನ್ನು ಭಾಷಿಕ ನಲೆಗಟ್ಟಿನಲ್ಲಿ, ಪೂರ್ವದ ಹಳೆಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡವೆಂದು ವಿಭಾಗಿಸಲಾಗಿದೆ. ಈ ಎಲ್ಲಾ ಕಾಲಘಟ್ಟದ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯವನ್ನು ಉತ್ತುಂಗಕ್ಕೇರಿಸಿವೆ. "ಮನುಷ್ಯ ಜಾತಿ ತಾನೊಂದೇ ವಲಂ" ಎಂಬ ಆದಿಕವಿ ಪಂಪನ ಚಿಂತನೆಯ ಬುನಾದಿಯಿಂದ ಆರಂಭಗೊಂಡ ಕನ್ನಡ ಸಾಹಿತ್ಯವು 'ಅರಮನೆಯಿಂದ ಕೇರಿಯ ಮನೆಗೆ ತಲುಪಿದ್ದು' 12ನೇ ಶತಮಾನದ ವಚನ ಸಾಹಿತ್ಯದ ಮೂಲಕ. ಇಂತಹ ಸಾಹಿತ್ಯ ಪ್ರಕಾರವನ್ನು ನೀಡಿದ್ದು 'ಕಲ್ಯಾಣ ಕರ್ನಾಟಕದ ಪ್ರದೇಶ' ಈ ಪ್ರದೇಶವು ಅನೇಕ ವಿಶೇಷತೆಗಳನ್ನು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸೃಜನಶೀಲತೆಯನ್ನು ವಚನ ಚಳುವಳಿಯ ಮೂಲಕ ಗಟ್ಟಿಯಾಗಿ ಬಿತ್ತಿ, ಅನೇಕ ಸಾಹಿತ್ಯ ಪ್ರಕಾರಗಳನ್ನು ಸಾಂಸ್ಕೃತಿಕ ಲೋಕಕ್ಕೆ ನೀಡಿದ್ದು ಗಮನಾರ್ಹ.

ತದನಂತರದ ಕನ್ನಡ ಸಾಹಿತ್ಯದ ಆಧುನಿಕ ಕಾಲಘಟ್ಟದ ಸಂದರ್ಭದಲ್ಲಿ ಅನೇಕ ಕಾವ್ಯ ಪ್ರಕಾರಗಳು ಕಾಣಿಸುತ್ತವೆ. ಇಂತವುಗಳಲ್ಲಿ 'ಗಜಲ್' ಸಾಹಿತ್ಯವೂ ಒಂದು. ಕಲ್ಯಾಣ ಕರ್ನಾಟಕದ ಪ್ರದೇಶವು ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಉರ್ದು ಆಡಳಿತ ಭಾಷೆಯಷ್ಟೇ ಆಗದೆ, ಸಾಮಾನ್ಯ ಜನರ ಸಮೀಪಕ್ಕೆ ಹೋಗಿ 'ಜಾತಿ ಧರ್ಮ'ಗಳನ್ನು ದಾಟಿದ್ದು ಚಾರಿತ್ರಿಕವಾಗಿ ಬಹಳ ಮುಖ್ಯವಾದ ಸಂಗತಿ. ಇದರಿಂದ 'ಹಿಂದೂ-ಮುಸ್ಲಿಮರ' ನಡುವೆ ಭಾವೈಕ್ಯತೆಯನ್ನು ಬೆಳೆಸುವಲ್ಲಿಯೂ 'ಗಜಲ್ ಸಾಹಿತ್ಯ'ದ ಪ್ರಮುಖ ಪಾತ್ರವಿದೆ. ಇದು ಭಾಷಿಕ

***Please cite this article as:*** ಪಾರ್ವತಮ್ಮ. (2026). ಕೊಪ್ಪಳ ಜಿಲ್ಲೆಯ ಗಜಲ್ ಸಾಹಿತ್ಯದಲ್ಲಿ ಬಂಡಾಯದ ಮನೋಧರ್ಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(2), 6–11

ಸೌಹಾರ್ದತೆಯನ್ನು ಬೆಳೆಸಿದ್ದು ಪ್ರಶಂಸನೀಯ. ಹೀಗಾಗಿ ಈ ಕಾವ್ಯ ಪ್ರಕಾರವೂ 'ಭಾಷೆ, ಪ್ರದೇಶ ಮತ್ತು ಜನಾಂಗ'ದ ಹಂಗಿಲ್ಲದೆ ಬೆಳೆದ ಕಾವ್ಯ ಛಂದಸ್ಸಾಗಿದೆ.

ಗಜಲ್ ಅರಬ್ಬಿ ಶಬ್ದವಾಗಿ ಪಾರ್ಶಿಯ ಕಾವ್ಯ ಪ್ರಕಾರವಾಗಿ ಮುಖ್ಯವಾಗಿ ಕಲ್ಯಾಣ ಕರ್ನಾಟಕದಲ್ಲಿ ಅಂತಃಕರಣದ ಅಭಿವ್ಯಕ್ತಿಯಾಗಿದೆ. ಗಜಲ್ ಎನ್ನುವುದು ಎದೆಯೊಳಗಿನ ಪಿಸುಮಾತು. ಇದು ಸಾಮಾನ್ಯವಾಗಿ ದಕ್ಕುವಂತಹದಲ್ಲ. ಮನಸ್ಸಿನ ಮಾತನ್ನು ಯಾರು ಹೃದಯದಿಂದ ಗ್ರಹಿಸಿಕೊಳ್ಳುತ್ತಾರೋ ಅಂತವರಿಗೆ ಮಾತ್ರ ಗಜಲ್‌ಗಳು ಅರ್ಥವಾಗುತ್ತವೆ. ಗಜಲ್‌ಕಾರರಲ್ಲಿ ಗಾಲಿಬ್, ಹಸರತ್, ಅಸಗರ್, ಪಾನಿ ಈ ಮೊದಲಾದ ಉರ್ದು ಕವಿಗಳು ಮತ್ತು ರೂಮಿ, ಸಾದಿ, ಖುಸ್ರೋ ಈ ಮೊದಲಾದ ಪರ್ಷಿಯನ್ ಕವಿಗಳು ಗಜಲ್ ಸಾಹಿತ್ಯ ಪ್ರಕಾರದಲ್ಲಿ ಮಹತ್ವದ ಸಾಧನೆ ಮಾಡಿದ್ದಾರೆ. ಈ ರೀತಿಯ ಗಜಲ್‌ಕಾರರು ಕನ್ನಡದಲ್ಲಿಯೂ ಕಾಣಿಸುತ್ತಾರೆ. ಮುಖ್ಯವಾಗಿ 'ಕಲ್ಯಾಣ ಕರ್ನಾಟಕ'ದ ಶಾಂತರಸರಿಂದ ಆರಂಭಗೊಳ್ಳುವುದು ಹೆಮ್ಮೆಯ ಸಂಗತಿ.

ಹೀಗೆ ಮುಕ್ತಾಯಕ್ಕ, ಜಂಬಣ್ಣ ಅಮರಚಿಂತ, ಕಾಶಿನಾಥ ಅಂಬಲಗಿ, ಆರೀಫ್‌ರಾಜ, ಜಯದೇವಿ ಗಾಯಕ್ವಾಡ್, ಮೊದಲಾದವರ ನಡುವೆ 'ಜೈನ ಕಾಶಿ' ಎಂದೇ ಪ್ರಸಿದ್ಧಗೊಂಡ, ತಿರುಳುಗನ್ನಡ ನಾಡಾದ 'ಕೋಪಣ ನಗರ'ದ ಉಲ್ಲೇಖ 'ಶ್ರೀವಿಜಯ ಕವಿರಾಜಮಾರ್ಗ' ಕೃತಿಯಲ್ಲಿ ಎಂಟನೇ ಶತಮಾನದಲ್ಲಿ ಆಗಿದೆ. ಇಂತಹ ಕೊಪ್ಪಳವು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಯಾದ ಕೊಪ್ಪಳದಲ್ಲಿಯೂ ನಿಜಾಮರ ಆಳ್ವಿಕೆಯಿಂದ ಉರ್ದು ಮೂಲದ ಗಜಲ್ ಸಾಹಿತ್ಯಕ್ಕೆ ಬಹುದೊಡ್ಡ ಪರಂಪರೆಯಿದೆ. ಪಂಚಾಕ್ಷರಿ ಹಿರೇಮಠ, ಬಸವರಾಜ್ ಸಬರದ, ಅಲ್ಲಾಗಿರಿರಾಜ, ರಮೇಶ ಗಬ್ಬೂರ್, ಅರುಣಾ ನರೇಂದ್ರ, ಅನುಸೂಯ ಜಹಗೀರದಾರ್ ಮತ್ತು ಪುಷ್ಪಲತಾ ಏಳುಬಾವಿ, ಯಲ್ಲಪ್ಪ ಹರ್ನಾಳಗಿಯಂತಹ ಅನೇಕ ಗಜಲ್ ಸಂಕಲನಕಾರರಂತೆ, ಬಿಡಿ–ಬಿಡಿ ಗಜಲ್‌ಕಾರರು ಅನೇಕರಿದ್ದಾರೆ.

ಗಜಲ್‌ನಲ್ಲಿ ಅಂತ್ಯಪ್ರಾಸವನ್ನೊಳಗೊಂಡ ಭಾವಗೀತೆಗಳನ್ನು ಬರೆಯುವುದು, ಅಷ್ಟೇ ಅಲ್ಲದೆ ಗಜಲ್‌ಗಳನ್ನು ಭಾವಪೂರ್ಣವಾಗಿ ಹಾಡಬಹುದಾಗಿದೆ. ಇವು ಪ್ರಮುಖವಾಗಿ ಶೃಂಗಾರ ರಸದ ಪ್ರೇಮ–ವಿರಹದ ಹಾಡುಗಳಾಗಿವೆ. ಗಜಲ್‌ಗಳೆಂದರೆ ಕೇವಲ 'ಪ್ರೀತಿ–ಪ್ರೇಮ'ವನ್ನು ಪ್ರತಿನಿಧಿಸುವ ಕಾವ್ಯ ಪ್ರಕಾರವಲ್ಲ. ಇದು ಅರಮನೆಯಿಂದ ಹೊರಗಡೆ ಬಂದ ಕಾವ್ಯ ಪ್ರಕಾರವಾಗಿರುವುದರಿಂದ ಇದಕ್ಕೆ 'ಸಾಮಾಜಿಕ ಜವಾಬ್ದಾರಿ' ಇದೆ ಆದ್ದರಿಂದ ಆತ್ಮ–ಆಧ್ಯಾತ್ಮಿಕತೆಯನ್ನು ಮುಖಾಮುಖಿಗೊಳಿಸಿ, ಲೋಕದ ಅನುಭವಕ್ಕೆ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಆಧುನಿಕ ಯುಗದಲ್ಲಿ ಶಾಯಿರಿ, ಗಜಲ್‌ಗಳು ತಮ್ಮದೇ ಆದ ಛಾಪನ್ನು ಮೂಡಿಸಿವೆ. ಗಜಲ್ ಎನ್ನುವುದು ಒಂದು ಎದೆಯೊಳಗಿನ ಸಾಧಾರಣ ಭಾಷೆ. ಇದು ಸಾಮಾನ್ಯವಾಗಿ ದಕ್ಕುವಂತಹದ್ದಲ್ಲ. ಇದೊಂದು ಮುಖ್ಯವಾದ ಕಾವ್ಯದ ಛಂದಸ್ಸಿನೊಂದಿಗೆ, ಅಂತ್ಯಪ್ರಾಸಗಳಿಂದ, ಹಾಡಬಹುದಾದ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ಈ ರೀತಿಯಲ್ಲಿರುವ ಗಜಲ್‌ಗಳಲ್ಲಿ ಶೃಂಗಾರ, ಪ್ರೇಮ–ವಿರಹದಂತಹ ಮುಖ್ಯ ಭಾವಗಳು ಹರಿದಾಡುತ್ತವೆ.

ಗಜಲ್ ಸಾಹಿತ್ಯವು ಕೇವಲ ಪ್ರೇಮ ನಿವೇದನೆ, ಮನದ ಮೋಹ ಮಿಡಿತ, ಆಧ್ಯಾತ್ಮಿಕತೆ, ಆಕರ್ಷಣೆ, ಇಹ ಪರಗಳ ನಂಟನ್ನು ಬೆಸೆಯುವ ಮನುಷ್ಯ ಮತ್ತು ದೈವದ ಸಾಕ್ಷಾತ್ಕಾರಕ್ಕೆ ಪ್ರೇರೇಪಿಸುವುದಷ್ಟೇ ಅಲ್ಲದೆ "ಬಂಡಾಯದ ಮನೋಧರ್ಮ"ವನ್ನೂ ಒಳಗೊಂಡಿದೆ. ಆದ್ದರಿಂದ ಗಜಲ್ ಸಾಹಿತ್ಯವು ಜಾತ್ಯತೀತ–ಧರ್ಮಾತೀತವಾದ ಒಂದು 'ಪ್ರಜಾಪ್ರಭುತ್ವ ಸಮಾಜದ ಕನಸನ್ನು ಕಟ್ಟಿಕೊಳ್ಳುವುದನ್ನು

ಪ್ರೇರೇಪಿಸುತ್ತದೆ. ಪ್ರಣಯದಿಂದ ಬಲುದೂರ ಸಾಗಿದ ಗಜಲ್ ಸಾಹಿತ್ಯ ತತ್ವ ಬೋಧನೆಯನ್ನು ಮಾಡುತ್ತದೆ. ಜಗತ್ತಿಗೆ ಮನುಷ್ಯ ಪ್ರೀತಿ ಬಿತ್ತಿದ ಬುದ್ಧ, ಬಸವ, ಅಂಬೇಡ್ಕರ್‌ರತ್ತ ಗಜಲ್‌ಗಳ ದೃಷ್ಟಿ ಹೊರಟಿದೆ. ಶತಮಾನಗಳಿಂದ ಅಪಮಾನಕ್ಕೆ ಒಳಗಾಗಿ 'ತುತ್ತು' ಅನ್ನಕ್ಕಾಗಿ, ಅಕ್ಷರಕ್ಕಾಗಿ, ಅಸಮಾನತೆಯನ್ನು ಅನುಭವಿಸಿದವರ ನೋವಿಗೆ ಮುಲಾಮಾಗಿ ಗಜಲ್ ಸಾಹಿತ್ಯ ಎದೆಯ ಹಾಡಾಗಿ ಹೊರ ಹೊಮ್ಮಿವೆ. ಇಲ್ಲಿ ಮುಖ್ಯವಾಗಿ ಸಮಾನತೆಯ ಸರದಾರ ಅಂಬೇಡ್ಕರ್ ಅವರನ್ನು ನೆನೆಯಲಾಗಿದೆ.

*"ಬೊಗಸೆ ನೀರು ಕೊಡದವರೆದುರು ಗುಡುಗಾಗಿ*
*ಗರ್ಜಿಸಿದ ಹೋರಾಟಗಾರ*
*ಮುಟ್ಟಿದರೆ ಮೈಲಿಗೆ ಎಂದು ದೂರ ಅಟ್ಟಿದವರಿಗೆ*
*ಸಮಾನತೆ ಬೋಧಿಸಿದ ಸರದಾರ"*[1]

ಗಜಲ್ ಎನ್ನುವುದು ಅರೇಬಿಕ್ ಸಾಹಿತ್ಯದಲ್ಲಿ ಹುಟ್ಟಿಕೊಂಡು ಕಾವ್ಯದ ಒಂದು ರೂಪವಾಗಿ ಬೆಳೆಯಿತು. ತದನಂತರ ಪರ್ಷಿಯನ್, ಉರ್ದು ಮತ್ತು ಇತರ ಭಾಷೆಗಳಲ್ಲಿ ಜನಪ್ರಿಯವಾಗಿ ಇತ್ತೀಚಿಗೆ ಕನ್ನಡ, ತೆಲುಗು ಇತ್ಯಾದಿ ದ್ರಾವಿಡ ಭಾಷೆಗಳಲ್ಲಿಯೂ ಮುಖ್ಯವಾಗಿ ಬೆಳೆದು ಬಂದಿದೆ. ಗಜಲ್ ಎಂದರೆ ಅದೊಂದು 'ಒಲವಿನ ಸಂಭಾಷಣೆ'ಯಾಗಿದೆ. ಕನ್ನಡದ ಗಜಲ್ ಪರಂಪರೆ ಪ್ರಾರಂಭಗೊಂಡಿದ್ದು 70ರ ದಶಕದಲ್ಲಿ ಶಾಂತರಸರಿಂದ ಅಂದರೆ ಕಲ್ಯಾಣ ಕರ್ನಾಟಕದ ರಾಯಚೂರಿನವರಾದ ಶಾಂತರಸರು ಅಪಾರ ಅಧ್ಯಯನದಿಂದ ಕನ್ನಡ ಭಾಷೆಯಲ್ಲಿ ಗಜಲ್‌ಗಳನ್ನು ರಚಿಸಿದರು.

ತದನಂತರ ಇವರ ಮಗಳಾದ ಎಚ್.ಎಸ್ ಮುಕ್ತಾಯಕ್ಕ ಮೊಟ್ಟಮೊದಲು "ನಲವತ್ತು ಗಜಲ್‌ಗಳು" ಎಂಬ ಸಂಕಲನವನ್ನು ಪ್ರಕಟಿಸಿದರು. ಹೀಗೆ ಶುರುವಾದ ಕನ್ನಡ ಗಜಲ್ ಸಾಹಿತ್ಯ ಪರಂಪರೆಯಲ್ಲಿ ಕೊಪ್ಪಳ ಜಿಲ್ಲೆಯವರ ಕೊಡುಗೆಯು ಅಪಾರವಾಗಿದೆ. ಅದರಲ್ಲಿ ಮುಖ್ಯವಾಗಿ ಬಸವರಾಜ ಸಬರದ, ಅಲ್ಲಾಗಿರಿ ರಾಜ್, ರಮೇಶ್ ಗಬ್ಬೂರ, ಅರುಣ ನರೇಂದ್ರ, ಅನಸೂಯ ಜಹಗೀರದಾರ, ಯಲ್ಲಪ್ಪ ಹರ್ನಾಳಗಿ, ವಿಜಯಲಕ್ಷ್ಮಿ ಕೊಟ್ಟಿಗಿ, ಶರಣಪ್ಪ ನಿಡಿಶೇಸಿ, ಪುಷ್ಪಲತಾ ಏಳುಭಾವಿ ಹೀಗೆ ಮುಂತಾದವರು ತಮ್ಮ ಗಜಲ್‌ಗಳಲ್ಲಿ "ಬಂಡಾಯದ ಪ್ರಜ್ಞೆಯನ್ನು" ಹೇಗೆ ನಿರ್ವಚನ ಮಾಡಿದ್ದಾರೆಂಬುದು ಪ್ರಸ್ತುತ ಲೇಖನದ ಮುಖ್ಯ ಉದ್ದೇಶವಾಗಿದೆ.

ಬಂಡಾಯವೆಂದರೆ "ಸಮಾಜದಲ್ಲಿರುವ ಅಸಮಾನತೆಗಳ ವಿರುದ್ಧ ಪ್ರತಿಭಟನೆ ಮಾಡುವುದು" ಎಂದರ್ಥ. ಇದು ಕೇವಲ ಪ್ರತಿಭಟನೆಯಲ್ಲ. ಜಡ ವ್ಯವಸ್ಥೆಯಲ್ಲಿರುವ ಸಾಂಪ್ರದಾಯಿಕ ಚಿಂತನೆಗಳ ಕಗ್ಗೊಲೆ. ಬರಗೂರ ರಾಮಚಂದ್ರಪ್ಪನವರ ಅಭಿಪ್ರಾಯದಂತೆ ಬಂಡಾಯವೆನ್ನುವುದು ಒಂದು ಮನೋಧರ್ಮ.ಆದ್ದರಿಂದಲೇ ಬಂಡಾಯ ಇದ್ದಕ್ಕಿದ್ದಂತೆ 'ಅವತರಿ'ಸುವುದಿಲ್ಲ. ಇಂತಹ ಬಂಡಾಯದ ವ್ಯಯಆಲೋಚನೆ 'ಕೊಪ್ಪಳ ಗಜಲ್ ಸಾಹಿತ್ಯದಲ್ಲಿ' ಹೇಗೆ ಮೂಡಿದೆಂಬ ಕುತೂಹಲಕ್ಕೆ ಈ ಲೇಖನ ಸಾಕ್ಷಿಯಾಗಿದೆ.

*"ಧರ್ಮದ ಗಲಭೆಗೆ ರುಂಡಗಳೇ ಖಾಲಿಯಾದ ಮೇಲೆ ಸ್ಮಶಾನ ಊರ ಹೊರಗೇಕೆ*
*ಅಲೆಮಾರಿಗೆ ಕಾಲು ಕಡಿದ ಮೇಲೆ ಊರ ಒಳಗೆ ದಾರಿಗಳೇಕೆ*
*ಹೃದಯದ ಮಾತಿಗೆ ನಂಬಿಕೆ ಇಲ್ಲವೆಂದಮೇಲೆ ಸಂಬಂಧಕ್ಕೆ ಹಸಿರು ನಿಶಾನೆ ಏಕೆ*
*ಮನುಷ್ಯರೇ ದೇವರಾದಮೇಲೆ ಊರ ತುಂಬ ಮಂದಿರ , ಮಸೀದಿ, ಚರ್ಚಗಳೇಕೆ"*[2]

ಈ ಸಾಲುಗಳಲ್ಲಿ ಮುಖ್ಯವಾಗಿ ಧರ್ಮರಾಜಕಾರಣ ಹೇಗೆ ಮನುಷ್ಯನನ್ನು ಸರ್ವನಾಶ ಮಾಡುತ್ತದೆಂಬ ರೂಪಕದೊಂದಿಗೆ, ಅಲೆಮಾರಿಗೆ ಸಂಚರಿಸದಂತೆ ಮಾಡಿ ಸಂಬಂಧಗಳಲ್ಲಿ ನಂಬಿಕೆ ಇಲ್ಲದಂತೆ ಬದುಕಿಸುವ ಯಾಂತ್ರಿಕ ಬದುಕನ್ನು ಪ್ರಶ್ನಿಸುವುದು ಈ ಗಜಲ್ ಸಾಲುಗಳಲ್ಲಿ ಕಾಣುತ್ತೇವೆ. "ಮನುಷ್ಯರೇ ದೇವರಾದ ಮೇಲೆ ಊರ ತುಂಬಾ ಮಂದಿರ, ಮಸೀದಿ, ಚರ್ಚುಗಳೇಕೆ" ಎಂಬ ಸಾಲುಗಳಲ್ಲಿ ಬಂಡಾಯದ ಧ್ವನಿಯಿದೆ. ಹೀಗೆ ಗಜಲ್‌ಗಳಲ್ಲಿ ಧರ್ಮವನ್ನು, ಧರ್ಮದ

ರಾಜಕಾರಣವನ್ನು ಭಿನ್ನವಾಗಿ ವಿರೋಧಿಸಲಾಗಿದೆ. ಮುಂದುವರೆದು ನೋಡುವುದಾದರೆ,

*"ಧರ್ಮ ಬದಲಿಸುವುದಾದರೆ ಬದಲಿಸಿ ಬಿಡೋಣ*

*ಅದು ಯಾರಪ್ಪನ ಸ್ವತ್ತು ಅಲ್ಲ.*

*ದಯವಿಲ್ಲದ ಧರ್ಮವೇಕೆ ಮೊಹಬ್ಬತ್ ಇರದ ಜೀವನವೇ ಇಲ್ಲ.*

*ಉಳ್ಳವರ ಮನೆಯ ಎಂಜಲು ನೆಕ್ಕುವ ನಾಲಿಗೆ ಮೇಲು ಧರ್ಮ ನಿಶಾನೆ.*

*ದಯಬೇಕು ಧರ್ಮಕ್ಕೆ ಬಂದೂಕಿಗಲ್ಲ, ಸಾವಲ್ಲೂ ಧರ್ಮದ ಬಯಲಾಟ ಸರಿಯಲ್ಲ"*[3]

ಎಂಬ ಎಚ್ಚರಿಕೆಯ ಮಾತುಗಳಿವೆ. ಧರ್ಮವು ಸದಾ ಮನುಷ್ಯನನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ಅಫೀಮು ಆಗಿದೆ. ಶತಮಾನಗಳಿಂದಲೂ ಪ್ರಭುತ್ವ ಮಾನವೀಯ ಮೌಲ್ಯಗಳನ್ನು ಕಣ್ಮರೆ ಮಾಡುತ್ತಾ ತನ್ನ ಅಟ್ಟಹಾಸವನ್ನು ಹಿಮ್ಮಡಿಗೊಳಿಸುವ ಸಂದರ್ಭವನ್ನು ಗಜಲ್‌ಕಾರರು ತಮ್ಮ ಗಜಲ್‌ಗಳಲ್ಲಿ ವಿರೋಧಿಸಿದ್ದಾರೆ. ಧರ್ಮವನ್ನು ವಿಡಂಬಿಸುತ್ತಾ, ಧರ್ಮ ಯಾರ ಸ್ವತ್ತೂ ಅಲ್ಲ. ದಯವಿಲ್ಲದ ಧರ್ಮ ನಮಗೇಕೆ? ಉಳ್ಳವರಿಗೊಂದು ಧರ್ಮ, ಇಲ್ಲದವರಿಗೊಂದು ಧರ್ಮ. ಈ ಅಸಮಾನತೆ ದೂರವಾಗಬೇಕಾದರೆ ಧರ್ಮವನ್ನೇ ಬದಲಾಯಿಸಿ ಬಿಡೋಣ ಎಂಬ ಪ್ರತಿರೋಧದ ಧ್ವನಿ ಈ ಗಜಲ್‌ನ ಸಾಲುಗಳಲ್ಲಿ ಕಾಣುತ್ತೇವೆ. ಧರ್ಮಕ್ಕೆ ಮಾನವೀಯ ಮೌಲ್ಯಗಳು ಬೇಕೆ ಹೊರತು, ಕೊಲ್ಲುವ ಮನಸ್ಥಿತಿಯಲ್ಲ. ಆದ್ದರಿಂದ ದಯೆ ಎನ್ನುವುದು ಧರ್ಮಕ್ಕೆ ಬೇಕಾಗಿದೆ ಬಂದೂಕಿಗಲ್ಲ. ಎಂಬ ರೂಪಕದ ಸಾಲುಗಳು ಬಂಡಾಯದ ಮನೋಧರ್ಮವನ್ನು ಪ್ರತಿನಿಧಿಸುತ್ತವೆ.

ಕೊಪ್ಪಳ ಜಿಲ್ಲೆಯ ಮತ್ತೊರ್ವ ಗಜಲ್‌ಕಾರರಾದ ರಮೇಶ್ ಗಬ್ಬೂರ್ ಅವರ "ಗಬ್ಬೂರ್ ಗಜಲ್" ಸಂಕಲನದಲ್ಲಿಯೂ ಬಂಡಾಯದ ಪ್ರಜ್ಞೆ ಇರುವುದು ಕಾಣಿಸುತ್ತದೆ. ಮುಖ್ಯವಾಗಿ

*"ಅಗ್ರಹಾರದ ಹುಡುಗ ಅಕ್ಷರದ ಅಂಗಳಕ್ಕೆ ಹೊರಟಾಗ ನಾ ಅನ್ನಕ್ಕಾಗಿ ಬೇಡುತ್ತಿದ್ದೆ*

*ದಿನವೂ ತುಂಬಿಸುವ ಹೊಟ್ಟೆಯ ಬವಣೆ ಬೇಡೆಂದು ನನ್ನ ಅರಿವಿನ ಪಾಟಿ ಚೀಲವಾಗಿ ಬಂದ"*[4]

ಈ ಶೇರ್‌ಗಳಲ್ಲಿ ಶತಮಾನಗಳಿಂದಲೂ ಜಾತಿಯ ಕಾರಣಕ್ಕಾಗಿ ಅಕ್ಷರದ ಅಂಗಳಕ್ಕೆ ಹೋಗದೆ, ತುತ್ತು ಅನ್ನಕ್ಕಾಗಿ ಭಿಕ್ಷೆ ಬೇಡುವ ತಳಸಮುದಾಯದ ಹುಡುಗನ ಎದೆಯ ನೋವಿದೆ. ಇದು ಕೇವಲ ಒಬ್ಬನ ನೋವಾಗದೆ, ಇಡೀ ತಳಸಮುದಾಯದ ಶೋಷಣೆಯ ಕರಾಳ ಚಿತ್ರಣವಾಗಿದೆ. ಹಸಿವು–ಬಡತನದಂತಹ ವಿಕಾರತೆಗಳು ದೂರವಾಗಿದ್ದು ಅಂಬೇಡ್ಕರ್ ಅವರ ಚಿಂತನೆಗಳಿಂದ ಎಂಬ ಮುಖ್ಯ ಸಂಗತಿ ತಿಳಿಯುತ್ತದೆ. ಮುಂದುವರೆದು ಯುದ್ಧವನ್ನು ನಿರಾಕರಿಸಿದ ಬುದ್ಧನ ಆಲೋಚನೆಗಳು ನೈಜತೆಯಿಂದ ಕಂಡುಬರುತ್ತವೆ. ಹೀಗೆ ಬಂಡಾಯದ ಸೂಕ್ಷ್ಮ ಎಳೆಗಳು ದಲಿತ ಸಂವೇದನೆಯ ಮೂಲಕ ಗಬ್ಬೂರವರ ಗಜಲ್‌ಗಳಲ್ಲಿ ಒಡಮೂಡಿರುವುದು ಕಂಡುಬರುತ್ತದೆ.

ಕನ್ನಡದ ಕಾವ್ಯ ಪರಂಪರೆಯಲ್ಲಿ ಗಜಲ್ ಕೂಡ ಒಂದು ಸೃಜನಶೀಲ ಸಾಹಿತ್ಯ ಪ್ರಕಾರವಾಗಿ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಕೊಪ್ಪಳದ ಗಜಲ್ ಸಾಹಿತ್ಯಕ್ಕೆ ಮಹಿಳಾ ಗಜಲ್‌ಕಾರ್ತಿಯರ ಕೊಡುಗೆಯು ಅಪಾರವಾಗಿದೆ. ಅದರಲ್ಲಿ ಮುಖ್ಯವಾಗಿ ಅರುಣಾ ನರೇಂದ್ರ ಅವರು ತಮ್ಮ ಗಜಲ್‌ಗಳಲ್ಲಿ ಪ್ರೀತಿ, ಪ್ರೇಮ, ವಿರಹದ ಜೊತೆಗೆ ಸಾಮಾಜಿಕ ಹಾಗೂ ವರ್ತಮಾನದ ಸಂಗತಿಗಳನ್ನು ಮುಖಾಮುಖಿಗೊಳಿಸಿದ್ದು ಕಾಣಿಸುತ್ತದೆ. ಬಡವರ ಕಷ್ಟ, ಹಸಿವು, ನೋವು, ಭರವಸೆ, ಲಿಂಗಸಮಾನತೆ, ಬುದ್ಧನ ಚಿಂತನೆ, ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಬಸವಣ್ಣನವರ ಮನುಷ್ಯ ಪ್ರೀತಿಯಂತಹ ಮುಖ್ಯ ಅಂಶಗಳನ್ನು ಇವರ "ಚಂದಿರನಿಲ್ಲದ ಬಾನಿನಲ್ಲಿ" ಎಂಬ ಗಜಲ್ ಸಂಕಲನದಲ್ಲಿ ಕಾಣುತ್ತೇವೆ.

***"ನಾನಿಲ್ಲಿ ಮೂಕಳಾಗಿರಬೇಕು ಮಾತನಾಡಿದರೆ ನಾಲಿಗೆ ಕತ್ತರಿಸುತ್ತಾರೆ***
***ನಾನಿಲ್ಲಿ ಜೀವಂತ ಶವವಾಗಿರಬೇಕು ಪ್ರತಿಭಟಿಸಿದರೆ ಗುಂಡಿ ತೋಡುತ್ತಾರೆ"***[5]

ಈ ಗಜಲ್ ಸಾಲುಗಳಲ್ಲಿ ಮುಖ್ಯವಾಗಿ ಸ್ತ್ರೀಸಂವೇದನೆ ಚಿತ್ರಣಗೊಂಡಿದೆ. ಜಾತಿ ಅಸಮಾನತೆಯಂತಹ ವಿಕೃತ ರೂಪದಂತೆ ಜೆಂಡರ್ ಅಸಮಾನತೆಯು ಸದಾ ಹೆಣ್ಣನ್ನು ಜೀವಂತವಾಗಿ ಸುಡುತ್ತಿದೆ. ಅವಳಿಗೆ ಮಾತನಾಡುವ ಅವಕಾಶವೂ ಇಲ್ಲ. ಇಂತಹ ಸಂದರ್ಭದಲ್ಲಿ ಒಂದು ವೇಳೆ ಆಕೆ ಮಾತನಾಡಿದರೆ ಆಕೆಯ ನಾಲಿಗೆಯನ್ನು ಕತ್ತರಿಸುವ ಅಧಿಕಾರವನ್ನು ಪುರುಷ ಪ್ರಧಾನ ವ್ಯವಸ್ಥೆ ವಹಿಸಿಕೊಂಡಿದೆ. ಈ ಕಾರಣಕ್ಕೆ ಹೆಣ್ಣು ಸದಾ ಮೌನವಾಗಿರಬೇಕು, ಅದೇಗೆಂದರೆ ಜೀವ ಇದ್ದ ಶವದಂತೆ. ಶೋಷಣೆಯ ಮಹಾಪುರವೇ ನಡೆದರು ಆಕೆ ಪ್ರತಿರೋಧವನ್ನು ವ್ಯಕ್ತಪಡಿಸದೆ ಸ್ವತಂತ್ರವನ್ನು ಕಳೆದುಕೊಂಡು ಬಂಧನದಲ್ಲಿರಬೇಕು. ಇಂತಹ ಪರಿಸ್ಥಿತಿಗಳಿಂದ ಸ್ತ್ರೀ ಬಿಡುಗಡೆಗೊಳ್ಳಬೇಕು ಎಂಬ ಮಹತ್ವದ ಧೋರಣೆ ಅರುಣಾ ನರೇಂದ್ರ ಅವರ ಗಜಲ್‌ನ ಧ್ವನಿಯಾಗಿದೆ. ಮುಂದುವರೆದು ಇವರ ಇನ್ನೊಂದು ಗಜಲ್ ಸಂಕಲನವಾದ "ಹಿಮದೊಡಲ ಬೆಂಕಿ" ಕೃತಿಯಲ್ಲಿ "ಗುಡಿಸಲಿನ ಜನರು ಕಂಡ ಕನಸುಗಳು ಮಹಡಿಯಲ್ಲಿ ಕೊಳೆತು ಹೋಗುತ್ತವೆ ಬಲಾತ್ಕಾರಕ್ಕೆ ಒಳಗಾದ ಹೆಣ್ಣುಮಕ್ಕಳು ಗೋರಿಯಲ್ಲಿ ನರಳುತ್ತಾರೆ ಈ ಲೋಕದಲ್ಲಿ" ಎಂಬ ಮಹತ್ವದ ಸಾಲುಗಳು ಬಡತನದ ಬೆಂಕಿಯಲ್ಲಿ ಬೆಂದ ಜನರ ಕನಸುಗಳು ಹೇಗೆ ಕೊಳೆಯುತ್ತವೆ ಎಂಬುದನ್ನು ರೂಪಕದಲ್ಲಿ ಹೇಳಲಾಗಿದೆ. ಪುರುಷ ಪ್ರಾಧಾನ್ಯ ವ್ಯವಸ್ಥೆಯಲ್ಲಿ ಸಿಲುಕಿದ ಸ್ತ್ರೀಯು ದೇಹ ಕೇಂದ್ರವಾಗಿಯೇ ನಿರ್ವಚನಗೊಂಡಿದ್ದಾಳೆ. ಈ ಕಾರಣಕ್ಕೆ ಅವಳ ಮೇಲಾಗುವ ಅತ್ಯಾಚಾರಕ್ಕೆ ಕೊನೆಯಿಲ್ಲದಾಗಿದೆ. ಸತ್ತು ಗೋರಿಯಲ್ಲಿದ್ದರೂ ಹೆಣ್ಣುಮಕ್ಕಳು ಮಾನಸಿಕ– ದೈಹಿಕ ಹಿಂಸೆಗೆ ಒಳಗಾಗುವುದು ತಪ್ಪುತಿಲ್ಲ. ಎಂಬುದು ಈ ಪುರುಷ ಲೋಕದ ವಿಪರ್ಯಾಸವಾಗಿದೆ. ಶೋಷಿತರ ಪರವಾದ ಈ ಗಜಲ್ ಗಳಲ್ಲಿ ಜಾತಿ– ಧರ್ಮ– ಬಡವ–ಶ್ರೀಮಂತ ಗಂಡು–ಹೆಣ್ಣು ಎಂಬ ಭೇದಭಾವಗಳನ್ನು ತೊಡೆದುಹಾಕಿ ಸಮ ಸಮಾಜದ ಆಶಯವನ್ನು ಪ್ರತಿನಿಧಿಸುವ ಮುಖ್ಯ ಧೋರಣೆಯಾದ ಬಂಡಾಯದ ಧ್ವನಿ ಇವರ ಗಜಲ್‌ಗಳಲ್ಲಿವೆ.

ಇನ್ನೋರ್ವ ಗಜಲ್ ಕಾರ್ತಿಯಾದ ಅನಸೂಯ ಜಹಗೀರ್‌ದಾರರವರ "ಆತ್ಮಾನು ಸಂಧಾನ" ಗಜಲ್ ಸಂಕಲನದಲ್ಲಿ ದಲಿತ ಸಂವೇದನೆ, ಸ್ತ್ರೀ ಸಂವೇದನೆಯಂತಹ ಬಂಡಾಯದ ಚಿಂತನೆಗಳಿವೆ. ಅದರಲ್ಲಿ ಮುಖ್ಯವಾಗಿ

***"ಕಣ್ಣಲ್ಲೇ ನೋವ ಹಿಡಿದಿಟ್ಟವರು ನಾವು ಹರಿಯುತ್ತಿಹ ಬೆವರ ಒರೆಸದವರು ನಾವು***
***ನಮ್ಮ ಹೆಸರಿನಲ್ಲಿ ಬೇಳೆ ಬೇಯಿಸುತ್ತಾರಂತೆ ಬೆಂದ ಬದುಕಿನಲ್ಲಿ ಜೀವ ಹಿಡಿದವರು ನಾವು"***[6]

ಈ ಗಜಲ್ ಸಾಲುಗಳಲ್ಲಿ ಶತಮಾನಗಳಿಂದ ಉಳ್ಳವರು ಶ್ರೀಮಂತರಾಗುತ್ತಾ, ಇಲ್ಲದವರು ಬಡವರಾಗುತ್ತಾ ಬದುಕುತ್ತಿರುವ ದುರಂತದ ಚಿತ್ರಣವಿದೆ. ಆರ್ಥಿಕ ಭದ್ರತೆ ಇಲ್ಲದ ಕಾರಣಕ್ಕಾಗಿ ಹಸಿವು ಬಡತನದಂತಹ ಬಂಧನಗಳಿಗೆ ಸಿಲುಕಿ ಕಣ್ಣಿನಲ್ಲಿ ನೋವನ್ನು ಹಿಡಿದಿಟ್ಟುಕೊಂಡು ದುಡಿದು ದುಡಿದು ಸೋರುವ ಬೆವರನ್ನೂ ಒರಿಸಿಕೊಳ್ಳದ ಶ್ರಮಜೀವಿಗಳು ಬಡವರು. ಇವರ ಹೆಸರನ್ನು ಹೇಳಿಕೊಂಡು ಉಳ್ಳವರು ತಮ್ಮ ಕಾರ್ಯಗಳನ್ನು ಮಾಡಿಕೊಳ್ಳುತ್ತಿರುವುದಕ್ಕೆ ಗಜಲ್ ಕಾರ್ತಿಯ ಪ್ರತಿರೋಧವಿದೆ. ಆದ್ದರಿಂದಲೇ ವಿಡಂಬನಾತ್ಮಕವಾಗಿ ತಮ್ಮ ಗಜಲ್‌ನಲ್ಲಿ ಚಿತ್ರಿಸಿದ್ದಾರೆ.

ಒಟ್ಟಾರೆಯಾಗಿ ಕೊಪ್ಪಳ ಜಿಲ್ಲೆಯ ಗಜಲ್ ಸಾಹಿತ್ಯವನ್ನು ಗಮನಿಸಿದಾಗ ಅನೇಕ ಪ್ರಕಟಿತ– ಅಪ್ರಕಟಿತ ಗಜಲ್ ಸಂಕಲನಗಳು ಕಾಣಿಸುತ್ತವೆ. ಪ್ರಸ್ತುತ ಲೇಖನದ ಮಿತಿಯ ಅನುಗುಣವಾಗಿ ಕೇವಲ ನಾಲ್ಕು ಜನರ ಗಜಲ್ ಗಳನ್ನು ವ್ಯಾಪ್ತಿಗೆ ಒಳಪಡಿಸಿಕೊಂಡು ಅವುಗಳಲ್ಲಿ ಕಂಡುಬರುವ

ಬಂಡಾಯದ ಮನೋಧರ್ಮವನ್ನು ಮಾತ್ರ ಗುರುತಿಸಲಾಗಿದೆ. ಸಾಮಾನ್ಯವಾಗಿ ಗಜಲ್ ಗಳೆಂದರೆ ಪ್ರೀತಿ– ಪ್ರಣಯದ ಅಭಿವ್ಯಕ್ತಿ ಎಂದು ತಿಳಿದುಕೊಂಡಿರುವುದು ಸಹಜವಾದರೂ, ಆದರೆ ಇತ್ತೀಚಿಗೆ ಗಜಲ್ ಗಳಲ್ಲಿ ಸಾಮಾಜಿಕ ವಿಡಂಬನೆ, ದಲಿತ ಸಂವೇದನೆ ಮತ್ತು ಸ್ತ್ರೀ ಸಂವೇದನೆಂತಹ ಬಂಡಾಯದ ಮನೋಧರ್ಮವನ್ನು ಒಳಗೊಂಡಿರುವುದು ಪ್ರಸ್ತುತ ಲೇಖನದಿಂದ ತಿಳಿದುಬಂದಿದೆ. ಸಮಾಜವನ್ನು ತಿದ್ದುವ ಕಾರ್ಯವನ್ನು ಸಾಹಿತ್ಯವು ಮಾಡುತ್ತದೆ ಎಂಬ ಮಾತಿನಲ್ಲಿ ಗಜಲ್ ಕೂಡ ಸೇರುತ್ತದೆ. ಅಲ್ಲಾಗಿರಿರಾಜ್ ಹೇಳುವಂತೆ "ಗಜಲ್ ಸಾಹಿತ್ಯವೆಂದರೆ ಕೇವಲ ಪ್ರೇಯಸಿಯ ಸೆರಗ ಸುತ್ತ ಚಳಿ ಕಾಯಿಸಿಕೊಳ್ಳುವ ಮೋಜಲ್ಲ. ಅದು ಮನುಷ್ಯ ಪ್ರೀತಿಯ ಎಲ್ಲಾ ಅನುಭವಗಳ 'ಅನುಭಾವ'ವಾಗಿರಬೇಕು. ಹುಟ್ಟು–ಸಾವುಗಳನ್ನು ಸಮನಾಗಿ ಪ್ರೀತಿಸುವ ಮನಸ್ಸಿನ ದರವೇಶಿತನದ ಕನ್ನಡಿಯೇ ಅದರ ಅಭಿವ್ಯಕ್ತಿಯಾಗಿರಬೇಕು" ಎಂಬ ಮಾತು ಸತ್ಯವಾಗಿದೆ. ಕೊಪ್ಪಳ ಜಿಲ್ಲೆಯ ಗಜಲ್‌ಗಳಲ್ಲಿ ಈ ರೀತಿಯ ಅಭಿವ್ಯಕ್ತಿಯಿದೆ. ಮುಖ್ಯವಾಗಿ ಸಮಾಜಮುಖಿಯಾದ ಚಿಂತನೆಗಳಿರುವುದು ಕಂಡುಬಂದಿದೆ. ಸಮಾಜದಲ್ಲಿರುವ ಅಸಮಾನತೆಯನ್ನು ಚಿತ್ರಿಸಿ ಅವುಗಳ ವಿರುದ್ಧ ಧ್ವನಿಯೆತ್ತಿರುವುದು ಗಜಲ್‌ಗಳಲ್ಲಿರುವ ಬಂಡಾಯದ ಮನೋಧರ್ಮವಾಗಿದೆ. ಹೀಗೆ ಕೊಪ್ಪಳ ಜಿಲ್ಲೆಯ ಗಜಲ್ ಸಾಹಿತ್ಯ ಪ್ರೇಮ–ವಿರಹದ ಜೊತೆಜೊತೆಯಲ್ಲಿಯೇ ಬಂಡಾಯವನ್ನು ಅಂತರಾಳದಲ್ಲಿಟ್ಟುಕೊಂಡು ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡುತ್ತಿರುವುದು ಗಮನಾರ್ಹವಾಗಿದೆ.

**ಕೊನೆಟಿಪ್ಪಣಿಗಳು**


1. ಅರುಣ ನರೇಂದ್ರ. (2025). *ಚಂದಿರನಿಲ್ಲದ ಬಾನಿನಲ್ಲಿ ಗಜಲ್ ಸಂಕಲನ.* ಸಿದ್ದಾರ್ಥ ಪ್ರಕಾಶನ, ಪುಟ ಸಂಖ್ಯೆ. 32
2. ಅಲ್ಲಾ ಗಿರಿರಾಜ್ ಕನಕಗಿರಿ. *ಸುರೂರ್ ಗಜಲ್.* ಪುಟ ಸಂಖ್ಯೆ. 96
3. ಅಲ್ಲಾಗಿರಿರಾಜ್. *ಫಕೀರ್ ಗಜಲ್.* ಪುಟ ಸಂಖ್ಯೆ. 37
4. ರಮೇಶ್ ಗಬ್ಬೂರ್. *ಗಬ್ಬೂರ್ ಗಜಲ್.* ಪುಟ ಸಂಖ್ಯೆ. 01
5. ಅರುಣಾ ನರೇಂದ್ರ. *ಚಂದಿರನಿಲ್ಲದ ಬಾನಿನಲಿ.* ಪುಟ ಸಂಖ್ಯೆ. 75
6. ಅನುಸೂಯ ಜಹಗೀರ್‌ದಾರ. *ಆತ್ಮಾನು ಸಂಧಾನ.* ಪುಟ ಸಂಖ್ಯೆ. 14